# ಕಲೆಯ ಮೂಲಕ ಬದುಕಿನ ಗುರುತ್ವ ತಿಳಿಯ ಹೊರಟವರಿಗೆ ನಿರಾಶೆಯಾಗದು

ಕೋಡಿಬೆಟ್ಟು ರಾಜಲಕ್ಷ್ಮಿ

1950ರಲ್ಲಿ ಅಸ್ಸಾಮ್‌ನ ಮಾಜುಲಿಯಲ್ಲಿ ಹುಟ್ಟಿದ ಘನಕಾಂತಾ ಬೋರಾ ಅವರು ನಾಲ್ಕನೇ ವಯಸ್ಸಿನಲ್ಲಿಯೇ ವೈಷ್ಣವಪಂಥದ ಧಾರ್ಮಿಕ ಮಂದಿರ 'ಸತ್ರ'ವನ್ನು ಸೇರಿದರು. ಸತ್ರಗಳೆಂದರೆ ಸಂಗೀತ, ನೃತ್ಯ, ನಾಟ್ಯ, ನಾಟಕಗಳ ಮೂಲಕ ಭಾಗವತದ ಸಂದೇಶ ಸಾರುವ ಧಾರ್ಮಿಕ ಕೇಂದ್ರಗಳು. ಅಲ್ಲಿ ಭಾಗವತದ ಆರಾಧನೆ ನಡೆಯುತ್ತದೆ. ಈ ಚಟುವಟಿಕೆಗಳಿಗಾಗಿ ತಮ್ಮನ್ನೇ ಸಮರ್ಪಿಸಿಕೊಂಡವರು ಸತ್ರಗಳಲ್ಲಿಯೇ ವಾಸಿಸುತ್ತಾರೆ. ಇಂತಹ ವಾತಾವರಣದಲ್ಲಿ ಬೆಳೆದ ಘನಕಾಂತಾ ಅವರಿಗೆ ತಮ್ಮ ಆರನೇ ವಯಸ್ಸಿನಲ್ಲಿಯೇ ಸತ್ರಿಯಾ ನೃತ್ಯದ ಪಾಠ, ತರಬೇತಿ ದೊರೆಯಿತು. ಅಂದಿನ ಪ್ರಸಿದ್ಧ ಗುರುಗಳಾದ ಮಣಿರಾಮ್ ದತ್ತ ಮುಕ್ತಿಯಾರ್ ಬಾರ್ಬಾಯನ್ ಅವರಿಂದ ಆರಂಭಿಕ ಪಾಠಗಳನ್ನು ಕಲಿತರು. ತಮ್ಮ ಇಡೀ ಬದುಕನ್ನು ಈ ಕಲೆಗಾಗಿ ಸಮರ್ಪಿಸಿಕೊಂಡರು. ಸತ್ರಿಯಾ ನೃತ್ಯಕ್ಕೆ ಶಾಸ್ತ್ರೀಯ ಮನ್ನಣೆ ದೊರೆಯಬೇಕು ಎಂಬ ಆಂದೋಲನವು ಅಸ್ಸಾಮ್‌ನಲ್ಲಿ ಆರಂಭವಾದಾಗ ಗುರು ಮಣಿರಾಮ್ ದತ್ತ ಮುಕ್ತಿಯಾರ್ ನೇತೃತ್ವ ವಹಿಸಿದರೆ, ಘನಕಾಂತಾ ಅವರು ಅದನ್ನು ಮುನ್ನಡೆಸಿದರು. ನೃತ್ಯಕ್ಕೆ ಶಾಸ್ತ್ರೀಯ ಮನ್ನಣೆ ದೊರೆತ ಸಂದರ್ಭದಲ್ಲಿ ಘನಕಾಂತಾ ಅವರ ನೃತ್ಯಶೈಲಿಯು ಸಾಂಪ್ರದಾಯಿಕ ಚೌಕಟ್ಟಿನ ಅತ್ಯುತ್ತಮ ನೃತ್ಯಶೈಲಿಯಾಗಿದೆ ಎಂಬ ಅಗ್ಗಳಿಕೆ ಪಡೆಯಿತು. ಈ ದೀರ್ಘ ಹಾದಿಯಲ್ಲಿ ಘನಕಾಂತಾ ಅವರು ಅನೇಕ ಏಳುಬೀಳುಗಳನ್ನು ಕಂಡಿದ್ದಾರೆ. ಭಕ್ತಿಪರಂಪರೆಯಲ್ಲಿ ನಂಬಿಕೆಯುಳ್ಳ ಅವರು ಸೋಲುಗಳಿಂದ ವಿಚಲಿತರಾದವರಲ್ಲ. ಯಶಸ್ಸಿಗೆ ಹಿಗ್ಗಿದವರಲ್ಲ. ಬದುಕಿನ ಪಯಣದಲ್ಲಿ ಪ್ರಶಸ್ತಿಗಳು ಅವರನ್ನು ಅರಸಿ ಬಂದಿವೆ. ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿಗಳು ಅವರ ಸಾಧನೆಯನ್ನು ಪುರಸ್ಕರಿಸಿವೆ. ಅವರು ತಮ್ಮ ಬದುಕಿನ ಅನುಭವಗಳನ್ನು 'ಮಯೂರ'ದ ಜೊತೆಗೆ ಹಂಚಿಕೊಂಡಿದ್ದು, ಆಯ್ದ ಭಾಗಗಳು ಇಲ್ಲಿವೆ.